ಈ) ಅನುದಾನ ಲಭ್ಯದ ನಂತರ ನರಗುಂದ ತಾಲ್ಲೂಕಿನಲ್ಲಿಯೂ ಸಹ ಮಿನಿ ವಿಧಾನ ಸೌಧ ನಿರ್ಮಾಣ ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಅಧ್ಯಕ್ಷರು: ಮಂಡಿಸಲಾಯಿತು.

(6) ಸಭೆಯ ಮುಂದಿಡಲಾದ ಕಾಗದ ಪತ್ರಗಳು

I **ಶ್ರೀ ಜೆ.ಹೆಚ್. ಪಟೇಲ್ (ಮುಖ್ಯ ಮಂತ್ರಿ) ಅವರು:** ಮಾನ್ಯ ಅಧ್ಯಕ್ಷರೇ, 1978ನೇ ಇಸವಿಯ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದ 8 (3) ನೇ ಕಲಮಿನ ಮೇರೆಗೆ.

1) 1974ನೇ ಇಸವಿಯ ಕರ್ನಾಟಕ ನಾಗರೀಕ ಸೇವಾ (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳ) ನಿಯಮಕ್ಕೆ ತಿದ್ದುಪಡಿಮಾಡಿರುವ ಸಂಬಂಧದಲ್ಲಿ ದಿನಾಂಕ 5-12-1996 ರಂದು ಹೊರಡಿಸಲಾದ ಡಿಪಿಎಆರ್ 21 ಎಸ್ಎಸ್ಆರ್ 95ನೇ ಕ್ರಮಾಂಕದ ಅಧಿಸೂಚನೆ;

1984ರ ಕರ್ನಾಟಕ ಲೋಕಾಯುಕ್ತ ಅಧಿನಿಯಮದ 12 (7) ನೇ ಪ್ರಕರಣದ ಮೇರೆಗೆ;

2) 1-4-1995 ರಿಂದ 31-3-1996 ರವರೆಗಿನ ಕರ್ನಾಟಕ ಲೋಕಾಯುಕ್ತದ 10ನೇ ಕ್ರೋಢಿಕೃತ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ. ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಮಂತ್ರಿ) ಮಾನ್ಯ ಅಧ್ಯಕ್ಷರೇ, ಮಾನ್ಯರೇ

II **ಶ್ರೀ ಆರ್ ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಹಾಗೂ ಮೂಲಭೂತ ಸೌಕರ್ಯಾಭಿವೃದ್ಧಿ ಮಂತ್ರಿ)** ರವರ ಪರವಾಗಿ,

1956 ಕಂಪೆನಿಗಳ ಕಾಯ್ದೆಯ 619ಎ ಪ್ರಕರಣದ ಮೇರೆಗೆ;

1995-96ನೇ ಸಾಲಿನ ಮಾರ್ಕೆಟಿಂಗ್ ಕನ್ಸಲೆಂಟ್ಸ್ ಅಂಡ್ ಏಜೆನ್ಸೀಸ್ ಲಿಮಿಟೆಡ್‌ನ 24ನೇ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

II **ಶ್ರೀ ಕೆ.ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಮಂತ್ರಿ) ಅವರು:** ಮಾನ್ಯ ಅಧ್ಯಕ್ಷರೆ, 1980ರ ಕಾಡಾ ಅಧಿನಿಯಮದ 25ನೇ ಪ್ರಕರಣದ ಮೇರೆಗೆ;

1995-96ನೇ ಸಾಲಿನ ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ಆಡಳಿತ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಕಾಗದಪತ್ರಗಳನ್ನು ಮಂಡಿಸಲಾಯಿತು.